ಕರ್ನಾಟಕ ಮೀನುಗಾರಿಕೆ ಬಂದರು ಸರಹದ್ದುಗಳ ಪ್ರಾಧಿಕಾರ ವಿಧೇಯಕ 1986 ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಸಿ. ಬೈರೇಗೌಡ (ಮೀನುಗಾರಿಕೆ ಮತ್ತು ಬಂದರುಗಳ ಸಚಿವರು).—ಮಾನ್ಯ ಅಧ್ಯಕ್ಷರೇ, ಕರ್ನಾಟಕ ಮೀನುಗಾರಿಕೆ ಬಂದರು ಸರಹದ್ದುಗಳ ಪ್ರಾಧಿಕಾರ ವಿಧೇಯಕ ೧೯೮೬, ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ, ಕರ್ನಾಟಕ ಮೀನುಗಾರಿಕೆ ಬಂದರು ಸರಹದ್ದುಗಳ ಪ್ರಾಧಿಕಾರ ವಿಧೇಯಕ ೧೯೮೬, ಮಂಡಿಸಲು ಅನುಮತಿ ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಸಿ. ಬೈರೇಗೌಡ (ಮೀನುಗಾರಿಕೆ ಮತ್ತು ಬಂದರುಗಳ ಸಚಿವರು).—ಮಾನ್ಯ ಅಧ್ಯಕ್ಷರೇ, ಕರ್ನಾಟಕ ಮೀನುಗಾರಿಕೆ ಬಂದರು ಸರಹದ್ದುಗಳ ಪ್ರಾಧಿಕಾರ ವಿಧೇಯಕ ೧೯೮೬, ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಗಿದೆ. *

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಸಿ. ಬೈರೇಗೌಡ (ಮೀನುಗಾರಿಕೆ ಮತ್ತು ಬಂದರುಗಳ ಸಚಿವರು).—ಮಾನ್ಯ ಅಧ್ಯಕ್ಷರೇ, ಕರ್ನಾಟಕ ಮೀನುಗಾರಿಕೆ ಬಂದರು ಸರಹದ್ದುಗಳ ಪ್ರಾಧಿಕಾರ ವಿಧೇಯಕ ೧೯೮೬—ಪರ್ಯಾಲೋಚಿಸ ಬೇಕೆಂದು ಕೋರುತ್ತೇನೆ.

ಇದರಲ್ಲಿ ಅಚ್ಚು ಆಗುವಾಗ ಒಂದು ತಪ್ಪಾಗಿದೆ. ಇದರ ಪ್ರಾಧಿಕಾರದ ಕೇಂದ್ರ ಸ್ಥಾನ ಮಣಿಪಾಲ್ ಎಂದು ಆಚ್ಚಾಗಿದೆ. ಅದಕ್ಕೆ ಬದಲಾಗಿ ಮಲ್ಪೆ ಎಂದು ತಿದ್ದಿಕೊಳ್ಳಬೇಕಾಗಿ ವಿನಂತಿಸು ತ್ತೇನೆ. ಮತ್ತು ಈ ವಿಧೇಯಕವನ್ನು ಸರ್ವಾನುಮತದಿಂದ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ಅಧ್ಯಕ್ಷರೇ, ಕರ್ನಾಟಕ ಮೀನುಗಾರಿಕೆ ಬಂದರು ಸರಹದ್ದುಗಳ ಪ್ರಾಧಿಕಾರ ವಿಧೇಯಕ ೧೯೮೬—ಈ ವಿಧೇಯಕವನ್ನು ಮಾನ್ಯ ಮಂತ್ರಿಗಳು ಮಂಡಿಸಿದ್ದಾರೆ. ಈ ವಿಧೇಯಕವನ್ನು ಮಂಡಿಸುವಾಗ ಬಹಳ ಬುದ್ಧಿವಂತಿಕೆಯಿಂದ ಮಾನ್ಯ ಸಚಿವರು ಭಾರತ ಸರ್ಕಾರ ಶಿಫಾರಸ್ಸು ಮಾಡಿದೆ, ಆದ್ದರಿಂದ ನಾವು ಈ ವಿಧೇಯಕವನ್ನು ಮಂಡಿಸುತ್ತಿದ್ದೇವೆ ಎನ್ನುವ ಸೂಚನೆಯನ್ನು ಕೊಟ್ಟಿದ್ದಾರೆ. ಒಂದು ವಿಚಾರ, ಈ ಮೀನುಗಾರಿಕೆ ಬಂದರು ಳು ಇರಬೇಕು, ಇವು ಕಾರ್ಯನಿರ್ವಹಣೆ ಮಾಡಬೇಕು, ಇದಕ್ಕೆ ಸರಿಯಾದ ಟರ್ಮಿನಲ್ ವ್ಯವಸ್ಥೆ ಆಗಬೇಕು, ಎನ್ನು ವುದರ ಬಗ್ಗೆ ಪ್ರಯತ್ನವನ್ನು ತಾವು ಮಾಡಲಿಲ್ಲ. ಸರಿಯಾದ ವ್ಯವಸ್ಥೆ ಇರಬೇಕು ಈ ವ್ಯವಸ್ಥೆ ಆದಮೇಲೆ ಕೆಲವು ಶುಲ್ಕಗಳನ್ನು ವಿಧಿಸಬೇಕಾಗುತ್ತದೆ. ಇದು ಒಪ್ಪತಕ್ಕದ್ದೆ. ಆದರೆ ಮೂಲ ವಿಧೇಯಕಕ್ಕೆ ನಾನು ವಿರೋಧ ವ್ಯಕ್ತಪಡಿಸುತ್ತಾ, ಈಗ ಇರುವ ವ್ಯವಸ್ಥೆ ಬಗ್ಗೆ ಎರಡು ಮಾತುಗಳನ್ನು ಆಡದೇಹೋದರೆ ತಪ್ಪಾಗುತ್ತದೆ ಎನ್ನುವ ಕಾರಣದಿಂದ ಎದ್ದು ನಿಂತಿದ್ದೇನೆ. ಮಲ್ಪೆ ಹೊನ್ನಾವರ ಬಂದರುಗಳಲ್ಲಿ ಶುಲ್ಕವನ್ನು ಹಾಕುವ ಕಾರ್ಯ ನಡೆದಿದೆ. ನಾನು ಶಾಸಕನಾಗಿ ಇದರಲ್ಲಿ ಕೆಲವು ರೀತಿಯ ಬದಲಾವಣೆ ಆಗಬೇಕೆಂದು ಮಾನ್ಯ ಸಚಿವರಲ್ಲಿ ಒತ್ತಾಯ ಮಾಡುತ್ತಾ, ಇದನ್ನು ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮಲ್ಪೆ ಬಂದರು ಸಂಪೂರ್ಣವಾಗಿ ರಚಿಸಲ್ಪಟ್ಟ ನಂತರ ಶುಲ್ಕ ಹಾಕಬೇಕೆಂದು ಇದೆ. ಇನ್ನೂ ಅಲ್ಲಿ ಕೆಲವೊಂದು ಕೊರತೆಗಳು ಇವೆ. ಅಲ್ಲಿ ಸಾಕಷ್ಟು ಲ್ಯಾಂಡಿಂಗ್ ಏರಿಯಾ ಇಲ್ಲ, ಶೌಚಾಲಯ ಇಲ್ಲ, ಟನಲ್ ಇಲ್ಲ, ಇವೆಲ್ಲಾ ಮಂತ್ರಿಗಳ ಗಮನಕ್ಕೆ ಬಂದಿದೆ. ಮೀನನ್ನು ಒಣಗಿಸುವ ವ್ಯವಸ್ಥೆ ಮಾಡಬೇಕು. ಕೊಚ್ಚಿನ್ ಬಂದರಿನಂತೆ ಪರಿಪೂರ್ಣವಾಗಿ ಮುಂದೆ ತೆಗೆದುಕೊಂಡು ಹೋಗಬೇಕು. ತದನಂತರ ಕೊನೆಗೆ ಒಂದು ನಿರ್ಧಾರಕ್ಕೆ ಬರತಕ್ಕ ವ್ಯವಸ್ಥೆ ಆಗಬೇಕು. ಕೊನೆಯ

---

* Annexure

ನಿರ್ಧಾರ ಕೈಗೊಳ್ಳುವಾಗ, ಮೀನುಗಾರರಿಗೆ ತೊಂದರೆ ಆಗದಹಾಗೆ, ಇದನ್ನು ಪರಿಶೀಲನೆ ಮಾಡಬೇಕು ಈ ವಿಧೇಯಕದ ಒಳಪಟ್ಟು ಈ ವ್ಯವಸ್ಥೆ ಬರುವುದರಿಂದ, ಈಗ ಹೇಳುವಂಥಾದ್ದು ಸಮಂಜಸ ಎನ್ನುವ ಕಾರಣದಿಂದ ಈ ಮಾತನ್ನು ಹೇಳಿಬಿಡ್ತೀನಿ.

ಶ್ರೀ ಸಿ ಬೈರೇಗೌಡ (ಮೀನುಗಾರಿಕೆ ಮತ್ತು ಬಂದರು ಸಚಿವರು) — ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಮಾನ್ಯ ಬಂಗಾರಪ್ಪನವರು ಈಗಾಗಲೇ ಸಾಕಷ್ಟು ಪ್ರಸ್ತಾಪ ಮಾಡಿದ್ದಾರೆ. ಇದರ ಬಗ್ಗೆ ಇನ್ನೂ ಹೆಚ್ಚು ಮಾತನಾಡುವ ಅವಶ್ಯಕತೆ ಇದೆ. ಆದರೆ ನಾನು ಅಷ್ಟು ಸಮಯವನ್ನು ಉಪಯೋಗಿಸುವುದಕ್ಕೆ ತಯಾರಾಗಿಲ್ಲ. ಮಲ್ಪೆ ಬಂದರು ಕಟ್ಟಿ ಮೂರು ವರ್ಷ ಮುಗಿದಿದ್ದರೂ ಸಹ ಇಲ್ಲಿಯವರೆಗೂ ಸರ್ಕಾರ ತನ್ನದೇ ಮೀನುಗಾರಿಕೆ ಬಂದರು ಎಂದು ಹೇಳತಕ್ಕಂಥ ಪರಿಸ್ಥಿತಿಯಲ್ಲಿ ಇರಲಿಲ್ಲ. ಅದನ್ನು ಇವತ್ತು ತೊಡೆದುಹಾಕಬೇಕು ಮತ್ತು ಮೀನುಗಾರರು ಹೆಚ್ಚಿನ ಅಭಿವೃದ್ಧಿಯಾಗುವುದಕ್ಕೆ ಇವರಿಗೆ ಹೆಚ್ಚು ಪ್ರಾಶಸ್ತ್ಯವನ್ನು ಕೊಟ್ಟು, ಅವರಿಗೆ ಹೆಚ್ಚು ಅವಕಾಶಗಳನ್ನು ಉಂಟುಮಾಡಬೇಕೆಂದು ಈ ಮಸೂದೆಯನ್ನು ತಂದಿದ್ದೇವೆ ಇವೊತ್ತು ಮಲ್ಪೆ ಮೀನುಗಾರಿಕೆ ಬಂದರಿನಲ್ಲಿ ಮೀನುಗಾರರಿಂದ ಶುಲ್ಕ ವಸೂಲ್ಮಾಡುವುದು ಕೇವಲ ಜುಜುಬಿ. ಅದು ಕೆಲವು ಪೈಸೆಗಳು ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಬಂದರನ್ನು ಸುವ್ಯವಸ್ಥಿತ ರೀತಿಯಲ್ಲಿ ಇಡಬೇಕು, ಅದು ಅವಶ್ಯಕ. ಇದಕ್ಕೆ ಯಾರಿಂದ ಆದರೂ ಸಂಗ್ರಹವನ್ನು ವಸೂಲ್ಮಾಡುತ್ತಿದ್ದೇವೆಂದರೆ ಯಾರು ಇವೊತ್ತಿನ ದಿವಸ ಮಧ್ಯಸ್ಥಗಾರರು ಎಂದು ಮಾನ್ಯ ಬಂಗಾರಪ್ಪನವರು ಹೇಳಿದರು ಅವರಿಂದಲೇ ಶುಲ್ಕವನ್ನು ವಸೂಲ್ಮಾಡಿ, ಬಡ ಮೀನುಗಾರರ ಹಿತರಕ್ಷಣೆಗಾಗಿ, ಬಂದರನ್ನು ಸುವ್ಯವಸ್ಥಿತ ರೀತಿಯಲ್ಲಿ ಇಡಬೇಕೆಂದು ಸರ್ಕಾರ ನಿರ್ಧಾರ ಮಾಡಿದೆ. ಇಲ್ಲಿಯವರೆಗೂ ಇದಕ್ಕೆ ಅವಕಾಶ ಇರಲಿಲ್ಲ ಮುಂದೆ ಮಾಡಬೇಕೆಂದು ಸರ್ಕಾರ ತೀರ್ಮಾನಕ್ಕೆ ಬಂದಿದೆ. ಮೀನುಗಾರರನ್ನು ಕಾಪಾಡುವುದಕ್ಕೆ ಕೆಲವು ಅವಶ್ಯಕತೆಗಳು ಇಲ್ಲವೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಶೌಚಾಲಯ ಇಲ್ಲ. ಮೀನು ಒಣಗಿಸುವುದಕ್ಕೆ ಅವಕಾಶ ಇಲ್ಲ ಎಂದು ಹೇಳಿದ್ದಾರೆ. ಆ ಮೀನು ಒಣಗಿಸುವುದಕ್ಕೆ ಅದರ ಕತೆ ಹೇಳಿದರೆ ಬಹಳ ದೊಡ್ಡದಾಗುತ್ತದೆ. ಇದನ್ನು ಈಗ ಹೇಳುವುದಕ್ಕೆ ಇಷ್ಟಪಡುವುದಿಲ್ಲ, ಮತ್ತೊಂದು ಸಾರಿ ಹೇಳೋಣ. ಎರಡನೇ ಹಂತವನ್ನು ಕೈಗೊಳ್ಳತಕ್ಕಂಥ ಅವಕಾಶ ಮತ್ತು ಅವಶ್ಯಕತೆ ಈಗ ಇಲ್ಲ. ಅಲ್ಲಿರತಕ್ಕಂಥ ಜಾಗ ಇವತ್ತಿನ, ಇರತಕ್ಕಂಥ ದೋಣಿಗಳನ್ನು ನಿಲ್ಲಿಸುವುದಕ್ಕೆ ಸಾಕಾಗುವುದಿಲ್ಲ ನಾವು ಎರಡನೇ ಹಂತವನ್ನು ತೆಗೆದುಕೊಳ್ಳಬೇಕಾದರೆ ಸಾಕಷ್ಟು ಹಣ ಬೇಕಾಗುತ್ತದೆ. ಮೀನು ಒಣಗಿಸುವ ಜಾಗದ ಬಗ್ಗೆ, ಇದೂ ಕೂಡ ಎರಡನೇ ಹಂತದಲ್ಲಿ ಬರುವ ಪರಿಸ್ಥಿತಿ ಇದೆ. ಈಗಾಗಲೇ ದಕ್ಷಿಣ ಕನ್ನಡ ಜಿಲ್ಲಾ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ, ಇದಕ್ಕೆ ಸೂಕ್ತವಾದ ಜಾಗ ಒದಗಿಸಬೇಕೆಂದು ಹೇಳಿದ್ದೇನೆ. ಸೂಕ್ತವಾದ ಜಾಗವನ್ನು ಒದಗಿಸುವುದಕ್ಕೆ ಈಗಾಗಲೇ ಸಿದ್ಧತೆ ನಡೆದಿದೆ ಎಂಬ ಮಾತನ್ನು ಹೇಳುತ್ತೇನೆ. ಇನ್ನು ಶೌಚಾಲಯ ಇಲ್ಲ, ನೀರು ಇಲ್ಲ, ಎಲ್ಲವೂ ಸ್ಲಿಪ್‌ವೇ ಎಂದು ಹೇಳಿದ್ದಾರೆ. ಮಲ್ಪೆ ಬಂದರಿನಲ್ಲಿ, ಈಗ ಆಳ ಸಮುದ್ರದ ಮೀನುಗಾರಿಕೆ ನಡೆಸುವುದಕ್ಕೆ ಸಾಧ್ಯವಿಲ್ಲ ಅಲ್ಲಿರತಕ್ಕ ಬೇಸಿನ್ ಆದೂ ಕೂಡ ಹೂಳಿನಿಂದ ತುಂಬಿದೆ. ಆಫ್ರೋಚ್ ಚಾನಲ್ ಹೂಳಿನಿಂದ ತುಂಬಿದೆ ಡ್ರಡ್ಜಿಂಗ್‌ಗೆ ೬-೭ಲಕ್ಷ ರೂಪಾಯಿಗಳು ಬೇಕಾಗುತ್ತವೆ. ಅಲ್ಲಿ ತುಂಬಿರತಕ್ಕ ಹೂಳನ್ನು ತೆಗೆಸಬೇಕು. ಇದಕ್ಕೆಲ್ಲಾ ಸುಮಾರು ೫೦-೬೦ ಲಕ್ಷ ರೂಪಾಯಿಗಳ ಹಣಬೇಕಾಗುತ್ತದೆ. ಇದಕ್ಕಾಗಿ ಅಲ್ಲಿರತಕ್ಕಂಥ ವ್ಯಾಪಾರಸ್ಥರಿಂದ ಹಣ ವಸೂಲ್ಮಾಡುತ್ತೇವೆಂದರೆ, ಪ್ರತ್ಯಕ್ಷವಾಗಿ ಮೀನುಗಾರರ ಮೇಲೆ ಬೀಳುತ್ತದೆ ಎನ್ನುವ ವಾದವನ್ನು ಇಟ್ಟರೆ ಹೇಗೆ ? ಇದನ್ನು ತಾವು ಆಲೋಚನೆ ಮಾಡಬೇಕು, ಹಾಗಾದರೆ ಯಾರು ಕೊಡಬೇಕು. ಹಾಗಾದರೆ ಮಧ್ಯಸ್ಥಗಾರರಿಂದ ಹಣ ಪಡೆಯುವುದು ಬೇಕಾಗಿಲ್ಲವೇ? ಮಧ್ಯಸ್ಥಗಾರರನ್ನು ತೊಡೆದುಹಾಕಬೇಕೆಂಬ ಉದ್ದೇಶದಿಂದ ಅವರಿಂದ ಹಣ ಪಡೆಯಲು ಈ ಮಸೂದೆಯನ್ನು ತಂದಿದ್ದೇವೆ. ತಾವುಗಳು ಇವನ್ನು ಹೃತ್ಪೂರ್ವಕವಾಗಿ ಸ್ವಾಗತಿಸಬೇಕಾಗಿತ್ತು. ಆದರೆ ಅವರನ್ನು ಪ್ರೋತ್ಸಾಹಿಸುವ ರೀತಿಯಲ್ಲಿ ಯಾರೂ ಮಾತನಾಡುವುದು ಬೇಡ ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಆಳ ಸಮುದ್ರದ, ಕಡಲ ತೀರದಲ್ಲಿ ಮೀನುಗಾರಿಕೆ ನಡೆಸುವವರು, ಅವರ ಏಳಿಗೆಗೋಸ್ಕರ ಅವರ ಅಭಿವೃದ್ಧಿಗೆ ಇರತಕ್ಕ ವಿಧೇಯಕ ಇದು. ಸುವ್ಯವಸ್ಥಿತವಾಗಿ ಬಂದರುಗಳನ್ನು ಮಾಡತಕ್ಕಂಥ ಅವಶ್ಯಕತೆ ಇದೆ. ಆದ್ದರಿಂದ ಇದಕ್ಕೆ ಒಂದು ಅಧಿಕಾರ ಇರತಕ್ಕ ಸಂಸ್ಥೆ ಬೇಕಾಗಿದೆ. ಆ ಸಂಸ್ಥೆಯೇ ಈ ಪ್ರಾಧಿಕಾರ ದಯಮಾಡಿ ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಅಧ್ಯಕ್ಷರು.—ಪ್ರಸ್ತಾವವನ್ನು ಮತಕ್ಕೆ ಹಾಕುತ್ತೇನೆ.

''ಕರ್ನಾಟಕ ಮೀನುಗಾರಿಕೆ ಬಂದರು ಸರಹದ್ದುಗಳ ಪ್ರಾಧಿಕಾರ ವಿಧೇಯಕ ೧೯೮೬ನ್ನು ಪರ್ಯಾಲೋಚಿಸುವುದು''

ಪ್ರಸ್ತಾವ ಅಂಗೀಕೃತವಾಯಿತು

ಖಂಡ ಖಂಡವಾಗಿ ವಿಧೇಯಕವನ್ನು ಪರಾಮರ್ಶಿಸುವುದು.

ಖಂಡ ೨ ರಿಂದ ೩೦ರ ವರೆಗೆ

ಅಧ್ಯಕ್ಷರು.—''ಖಂಡ ೨ ರಿಂದ ೩೦ರ ವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತವೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ ೨ ರಿಂದ ೩೦ರ ವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ ೧ ಇತ್ಯಾದಿ :

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ''ಮೊದಲನೇ ಖಂಡ, ದೀರ್ಘಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸಂಪ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.''

ಪ್ರಸ್ತಾವನ್ನು ಅಂಗೀಕರಿಸಲಾಯಿತು.

(ಮೊದಲನೇ ಖಂಡ, ದೀರ್ಘಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು.)

ಪ್ರಸ್ತಾವದ ಅಂಗೀಕಾರ

೪-೩೦ ಪಿ. ಎಂ.

ಶ್ರೀ ಸಿ. ಭೈರೇಗೌಡ (ಮೀನುಗಾರಿಕೆ ಮತ್ತು ಬಂದರು ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ''ಕರ್ನಾಟಕ ಮೀನುಗಾರಿಕೆ ಬಂದರು ಕಟ್ಟೆಗಳ ಪ್ರಾಧಿಕಾರ ವಿಧೇಯಕ ೧೯೮೬ ಇದನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.''

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ''ಕರ್ನಾಟಕ ಮೀನುಗಾರಿಕೆ ಬಂದರು ಕಟ್ಟೆಗಳ ಪ್ರಾಧಿಕಾರ ವಿಧೇಯಕ ೧೯೮೬, ಇದನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

ಕರ್ನಾಟಕ ಕೈಗಾರಿಕಾ ಸಂಸ್ಥೆಗಳ (ರಾಷ್ಟ್ರೀಯ ಮತ್ತು ಹಬ್ಬದ ರಜಾದಿನಗಳು) (ತಿದ್ದುಪಡಿ) ವಿಧೇಯಕ, ೧೯೮೬.

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಡಿ. ಮಂಜುನಾಥ್ (ಕಾರ್ಮಿಕ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ೧೯೮೬ನೇ ಇಸವಿಯ ಕರ್ನಾಟಕ ಕೈಗಾರಿಕಾ ಸಂಸ್ಥೆಗಳ (ರಾಷ್ಟ್ರೀಯ ಮತ್ತು ಹಬ್ಬದ ರಜಾ ದಿನಗಳು) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ನಾನು ಸೂಚಿಸುತ್ತೇನೆ.

ಪ್ರಸ್ತಾವನ್ನು ಮಂಡಿಸಲಾಯಿತು.

ಅಧ್ಯಕ್ಷರು.—ಈ ವಿಧೇಯಕದ ಬಗ್ಗೆ ಮಂತ್ರಿಯವರು ವಿವರಣೆ ನೀಡಬಹುದು.

ಶ್ರೀ ಡಿ. ಮಂಜುನಾಥ್ (ಕಾರ್ಮಿಕ ಮಂತ್ರಿ).—ಮಾನ್ಯ ಅಧ್ಯಕ್ಷರೇ, ಕಳೆದ ವರ್ಷ ಇದೇ ಸಂಬಂಧವಾಗಿ ನಾನು ಒಂದು ತಿದ್ದುಪಡಿಯನ್ನು ತಂದಿದ್ದೆ. ಅದು ಇಲ್ಲಿ ಪಾಸಾಗಿದೆ. ಅದರ ಪ್ರಕಾರ